(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೇಸರಗಿಯಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಿಸಲು ಹಿಂದಿನ ಸರ್ಕಾರದವರು ಒಪ್ಪಿಗೆ ನೀಡಿದ ಸಂಗತಿ ನಿಜವೇ;

(ಆ) ಹಾಗಿದ್ದರಿಂದ ಈಗ ನೇಸರಗಿಯಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಿಸುವ ಕೆಲಸ ಯಾವ ಹಂತದಲ್ಲಿರುವುದು ಮತ್ತು ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಗುವುದು?

ಶೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಹೌದು. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ 33:11 ಕೆ.ವಿ. 1X5 ಎಂವಿಎ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಕೆ.ವಿ.ಪ್ರ.ನಿ.ನಿಗಮದ ತಾಂತ್ರಿಕ ಸಮಿತಿಯ ಅನುಮೋದನೆ ನೀಡಿರುತ್ತದೆ. ಈ ಕಾಮಗಾರಿಯು ಬೈಲಹೊಂಗಲದಲ್ಲಿ ಪ್ರಸ್ತುತ ಇರುವ 33:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 11:33 ಕೆ.ವಿ.ಗೆ ಉನ್ನತೀಕರಿಸುವ ಕಾಮಗಾರಿಯ ಮೇಲೆ ಅವಲಂಬಿತವಾಗಿರುತ್ತದೆ. ಈ ಎರಡೂ ಕಾಮಗಾರಿಗಳಿಗೆ ಹಾಗೂ ಸಂಪಗಾಂವ್‌ನಲ್ಲಿ ಒಂದು 33:11 ಕೆ.ವಿ. 1X5ಎಂವಿಎ, ಸಬ್ ಸ್ಟೇಷನ್ ಸ್ಥಾಪನೆಯ ಕಾಮಗಾರಿಯೂ ಸೇರಿದಂತೆ ಒಟ್ಟು ಮೂರು ಕಾಮಗಾರಿಯೂ ಸೇರಿದಂತೆ ಒಟ್ಟು ಮೂರು ಕಾಮಗಾರಿಗಳಿಗೆ ಗ್ರಾಮೀಣ ವಿದ್ಯುದೀಕರಣ ನಿಗಮವು ಸಾಲ ಸೌಲಭ್ಯವನ್ನು ಮಂಜೂರು ಮಾಡಿರುತ್ತದೆ. ಈ ಮೂರೂ ಕಾಮಗಾರಿಗಳಿಗೆ ಸೇರಿದಂತೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಲಾಗುತ್ತಿದೆ. ವಿವರವಾದ ಯೋಜನಾ ವರದಿಗೆ ನಿಗಮದ ಕಾರ್ಪೋರೇಟ್ ಕಚೇರಿಯಿಂದ ಅಡಳಿತಾತ್ಮಕ ಅನುಮೋದನೆ ಪಡೆದ ನಂತರ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಅಲ್ಲದೇ ನೇಸರಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ 33:11 ಕೆ.ವಿ. 1X5 ಎಂವಿಎ ಸಬ್ ಸ್ಟೇಷನ್‌ಗೆ ಅವಶ್ಯಕವಿರುವ ಜಮೀನನ್ನು ಗುರುತಿಸಲಾಗಿದ್ದು, ಭೂ ಸ್ವಾಧೀನದ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಬಸವಕಲ್ಯಾಣ ತಾಲ್ಲೂಕಿನ ಹಾಲ್ಗುಡ ಕೆರೆಯು ಒಡೆದು ಹೋಗಿದ್ದರಿಂದ ಉಂಟಾದ ನಷ್ಟದ ಬಗ್ಗೆ

1831 (2505) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕಳೆದ ವರ್ಷದಲ್ಲಿ ಬಸವಕಲ್ಯಾಣ ತಾಲ್ಲೂಕಿನ ಹಾಲ್ಗುಡ ಕೆರೆಯು ಒಡೆದು ಹೋಗಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಹಾಗಿದ್ದಲ್ಲಿ ಈ ಕೆರೆಯು ಒಡೆದು ಹೋಗಿದ್ದರಿಂದ ಹಾಲ್ಗುಡ, ಬಡ್ಡರಗಾ, ಶಿರಗಾಪೂರ, ಖೇರ್ಡಾ ಗ್ರಾಮಗಳಲ್ಲಿ ಬೆಳೆ ಹಾನಿ, ಜಮೀನು ಹಾನಿ, ಪೈಪಲೈನ್‌ಗಳು ಒಡೆದುಹೋಗಿ ಬಾವಿಗಳು ಮುಚ್ಚಿಹೋಗಿ ಬೆಳೆದು ನಿಂತಿದ್ದ ಫಸಲುಗಳಾದ ದ್ರಾಕ್ಷಿ, ಪಪ್ಪಾಯಿ ಬೆಳೆಗಳಿಗೆ ತೀವ್ರವಾದ ಹಾನಿಯಾಗಿರುವುದು ನಿಜವಲ್ಲವೆ;

(ಇ) ಕಾರಣಗಳಿಂದ ವಿದ್ಯುತ್ ಲೈನುಗಳು ಹಾಳಾಗಿ ನಾಲಾದ ಹಾದಿ ಬದಲಾಗಿದ್ದು ನಿಜವಲ್ಲವೆ;

(ಈ) ಹಾಗಿದ್ದಲ್ಲಿ ಇದರಿಂದ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಲಾಗಿದೆಯೆ; (ಪರಿಹಾರ ನೀಡಿದ ಮೊತ್ತ ಪಡೆದುಕೊಂಡಿರುವವರ ಹೆಸರು ವಿವರಗಳನ್ನು ಒದಗಿಸುವುದು)

(ಉ) ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

(ಅ) ಬಂದಿದೆ.

(ಆ) ದಿನಾಂಕ:2-8-99ರಂದು ಬಿದ್ದ ಭಾರೀ ಮಳೆಯಿಂದಾಗಿ ಕೆರೆಯ ಸುತ್ತಲೂ ಇದ್ದ ಜಮೀನುಗಳು ಬೆಳೆಗಳು ತೀವ್ರವಾಗಿ ಹಾನಿಗೊಳಗಾಗಿರುತ್ತವೆ.

(ಇ) ನಿಜ.

(ಈ) ಪರಿಹಾರ ನೀಡಿಲ್ಲ. ಈ ಕುರಿತು ಕಂದಾಯ ಇಲಾಖೆಯಿಂದ ಸಮೀಕ್ಷೆ ಮಾಡಿಸಿ ರೈತರಿಗೆ ಪರಿಹಾರದ ಮೊತ್ತವನ್ನು ಕೊಡಲು ವಿವರವಾದ ವರದಿಯನ್ನು ಕೋರಲಾಗಿದೆ.

(ಉ) ಸದರಿ ಕೆರೆಯು ಎರಡು ಬಾರಿ ಸ್ವಾಭಾವಿಕ ಭಾರೀ ಮಳೆಯಿಂದಾಗಿ ಒಡೆದುಹೋದ ಪ್ರಯುಕ್ತ ಕೆರೆಯ ಸುತ್ತಲೂ ಇದ್ದ ಜಮೀನುಗಳ ಬೆಳೆಗಳು ಹಾನಿಗೊಳಗಾಗಿರುವುದಕ್ಕೆ ಕೆರೆಯ ದುರಸ್ತಿ ಸಲುವಾಗಿ ಇದ್ದ ಸಿಬ್ಬಂದಿಗಳು ಯಾವು ಹೊಣೆಗಾರರಾಗಿರುವುದಿಲ್ಲ.

ಚಿಕ್ಕಪೇಟೆಯ ಒಳಚರಂಡಿ ಪೈಪುಗಳ ಬದಲಾವಣೆ

1883 (2558) ಶ್ರೀ ಪಿ.ಸಿ. ಮೋಹನ್(ಚಿಕ್ಕಪೇಟೆ):

ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1997-98ನೇ ಸಾಲಿನಲ್ಲಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಒಳಚರಂಡಿ ಪೈಪುಗಳ ಬದಲಾವಣೆಗಾಗಿ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತವೆಷ್ಟು;

(ಆ) ಪೈಪುಗಳು ಯಾವ ಯಾವ ಸ್ಥಳಗಳಲ್ಲಿ ಬದಲಾವಣೆ ಮಾಡಲು ಉದ್ದೇಶಿಸಲಾಗಿದೆ; ವಿವರನೀಡುವುದು?

ಶೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

(ಅ) ರೂ. 15,00 ಲಕ್ಷಗಳು

(ಆ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಪ್ರದೇಶಗಳಾದ ಲಾಲ್ ದಾಸ್ ವೆಂಕಟರಮಣ ಸ್ವಾಮಿ ಗುಡಿ ಬೀದಿ, ಜೆ.ಎಂ.ಲೇನ್, ಬೇತಿಂಗ್ ಘಾಟ್, ಸುಲ್ತಾನ್ ಪೇಟೆ ಕ್ರಾಸ್,